One of the leading Urban Co-op. Bank in Coastal Karnataka

**Mahalakshmi Co-op. Bank Ltd., Udupi**
**ಮಹಾಲಕ್ಷ್ಮೀ ಕೋ-ಓಪರೇಟಿವ್ ಬ್ಯಾಂಕ್ ಲಿ., ಉಡುಪಿ**

# ಮಹಾಸಭೆ ನೋಟೀಸು

ಬ್ಯಾಂಕಿನ 2025–26ನೇ ಆರ್ಥಿಕ ವರ್ಷದ **48ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು** ಬ್ಯಾಂಕಿನ ಅಧ್ಯಕ್ಷರಾದ **ಶ್ರೀ ಯಶ್‌ಪಾಲ್ ಎ. ಸುವರ್ಣ**ರವರ ಅಧ್ಯಕ್ಷತೆಯಲ್ಲಿ **ದಿನಾಂಕ: 26–08–2026ನೇ ಬುಧವಾರ ಪೂರ್ವಾಹ್ನ ಗಂಟೆ 10.00ಕ್ಕೆ ಶ್ಯಾಮಿಲಿ ಸಭಾಂಗಣ ಅಂಬಲಪಾಡಿ, ಉಡುಪಿ** ಇಲ್ಲಿ ಈ ಕೆಳಗಿನ ಕಾರ್ಯಸೂಚಿ ನಿರ್ವಹಿಸುವರೇ ಕರೆಯಲಾಗಿದೆ. ಮಾನ್ಯ ಸದಸ್ಯರೆಲ್ಲರೂ ಕ್ಲಪ್ತ ಸಮಯದಲ್ಲಿ ಹಾಜರಿದ್ದು ಕಾರ್ಯಕಲಾಪಗಳಲ್ಲಿ ಭಾಗವಹಿಸಿ ಸಹಕರಿಸಬೇಕಾಗಿ ವಿನಂತಿ.

## ಕಾರ್ಯಸೂಚಿ

1. 48ನೇ ವಾರ್ಷಿಕ ಮಹಾಸಭೆಯ ನೋಟೀಸನ್ನು ಓದಿ ದೃಢೀಕರಿಸುವುದು.
2. ದಿನಾಂಕ:07–09–2025ರಂದು ನಡೆದ 47ನೇ ವಾರ್ಷಿಕ ಮಹಾಸಭೆಯ ನಡವಳಿಕೆಗಳನ್ನು ಓದಿ ದೃಢೀಕರಿಸುವುದು.
3. 2025–26ನೇ ಸಾಲಿನ ಆಡಳಿತ ಮಂಡಲಿಯ ವಾರ್ಷಿಕ ವರದಿಯ ಸ್ವೀಕಾರ.
4. 2025–26ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಮತ್ತು ಆರ್ಥಿಕ ಲೆಕ್ಕ ತಖ್ತೆಗಳ ಪರಿಗಣನೆ.
5. 2025–26ನೇ ಸಾಲಿನ ಖರ್ಚು ವೆಚ್ಚಗಳ ಅಂದಾಜು ಪತ್ರಕ್ಕಿಂತ ಹೆಚ್ಚುವರಿ ಖರ್ಚುಗಳ ಅಂಗೀಕಾರ.
6. 2026–27ನೇ ಸಾಲಿನ ಅಂದಾಜು ಆಯವ್ಯಯ ಪತ್ರದ ಮಂಡನೆ ಮತ್ತು ಸ್ವೀಕಾರ.
7. 2025–26ನೇ ಸಾಲಿನ ನಿವ್ವಳ ಲಾಭದ ವಿಂಗಡಣೆ ಮತ್ತು ಮಂಜೂರಾತಿ.
8. ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಯಂತೆ 2026–27ನೇ ಸಾಲಿಗೆ ಶಾಸನಬದ್ಧ ಲೆಕ್ಕ ಪರಿಶೋಧಕರ ನೇಮಕಾತಿ.
9. ಸಹಕಾರಿ ಕಾಯ್ದೆ 1959ರ ಕಲಂ 64ರಂತೆ ನಡೆಸಿದ ವಿಚಾರಣಾ ವರದಿಯ ಕುರಿತು.
10. ಬ್ಯಾಂಕಿಗೆ ಸೇರ್ಪಡೆಗೊಂಡ / ವರ್ಗಾವಣೆಗೊಂಡ ಹಾಗೂ ಹಿಂಪಡೆದ / ತೆಗೆದು ಹಾಕಿದ ಸದಸ್ಯರ ಪಟ್ಟಿಯ ಪರಿಶೀಲನೆ.
11. ಬ್ಯಾಂಕಿನ "ಬಿ" ತರಗತಿಯ ಸಹಸದಸ್ಯರನ್ನು "ಎ" ತರಗತಿಯ ಸಾಮಾನ್ಯ ಸದಸ್ಯತ್ವಕ್ಕೆ ವರ್ಗಾಯಿಸುವ ಕುರಿತು.
12. ಭಾರತೀಯ ರಿಸರ್ವ್ ಬ್ಯಾಂಕಿನ ಅಧಿನಿಯಮ ಹಾಗೂ ಮಾನದಂಡಕ್ಕೆ ಒಳಪಟ್ಟು ಇತರ ಪಟ್ಟಣ ಸಹಕಾರಿ ಬ್ಯಾಂಕನ್ನು ನಮ್ಮ ಬ್ಯಾಂಕಿನೊಂದಿಗೆ ವಿಲೀನದ ಪ್ರಸ್ತಾವನೆಯ ಬಗ್ಗೆ ಇಲಾಖಾ ಅನುಮತಿ ಪಡೆದು ಕಾರ್ಯಪ್ರವೃತ್ತರಾಗಲು ಸಭೆಯ ಅನುಮೋದನೆಗಾಗಿ ಮಂಡನೆ.
13. ಅಧ್ಯಕ್ಷರ ಅನುಮತಿ ಮೇರೆಗೆ ಮಹಾಸಭೆಯ ಕಾರ್ಯವ್ಯಾಪ್ತಿಗೊಳಪಟ್ಟು ಬರಬಹುದಾದ ಇತರ ವಿಷಯಗಳು.
(ವಿಷಯವನ್ನು ಮಹಾಸಭೆಯ 5 ದಿನಗಳ ಮುಂಚಿತವಾಗಿ ಬರಹದ ಮೂಲಕ ಆಡಳಿತ ಕಛೇರಿಗೆ ವ್ಯವಹಾರದ ಸಮಯದಲ್ಲಿ ಸಲ್ಲಿಸತಕ್ಕದ್ದು)

**ಆಡಳಿತ ಮಂಡಲಿಯ ಆದೇಶದ ಮೇರೆಗೆ**

ಸ್ಥಳ : ಉಡುಪಿ
ದಿನಾಂಕ : 26–07–2026

**ಶ್ರೀ ಶರತ್‌ಕುಮಾರ್ ಶೆಟ್ಟಿ ಎನ್.**
ವ್ಯವಸ್ಥಾಪನಾ ನಿರ್ದೇಶಕರು

## ವಿಶೇಷ ಸೂಚನೆ :

1. ಪ್ರಸ್ತುತ ಒಬ್ಬ ಸದಸ್ಯರಿಗೆ ರೂ.1,00,00,000/–ಯವರೆಗೆ ಪಾಲು ಬಂಡವಾಳವನ್ನು ಪಡೆಯಲು ಮುಕ್ತ ಅವಕಾಶವನ್ನು ಕಲ್ಪಿಸಲಾಗಿದ್ದು, ಸದಸ್ಯರು ಇದರ ಸದುಪಯೋಗವನ್ನು ಪಡೆದುಕೊಂಡು ತಮ್ಮ ಪಾಲು ಬಂಡವಾಳವನ್ನು ಹೆಚ್ಚಿಸಿಕೊಳ್ಳಬಹುದು.
2. ಬ್ಯಾಂಕಿನ ಉಪನಿಬಂಧನೆಯ ಪ್ರಕಾರ ಪ್ರತಿ ಷೇರಿನ ಮುಖಬೆಲೆ ರೂ.1000 ಆಗಿರುವುದರಿಂದ, ಪಾಲು ಬಂಡವಾಳವು ಸಾವಿರದ ಗುಣಕದಲ್ಲಿರತಕ್ಕದ್ದು. ಆದುದರಿಂದ ಅಪೂರ್ಣವಾದ ಷೇರುಗಳನ್ನು ಪೂರ್ಣ ಷೇರುಗಳಾಗಿ ಪರಿವರ್ತಿಸುವರೇ ಈ ಮೂಲಕ ಸೂಚಿಸಲಾಗಿದೆ.
3. ಬ್ಯಾಂಕಿನ ಉಪನಿಬಂಧನೆಯ ಪ್ರಕಾರ ಬ್ಯಾಂಕಿನ ಸದಸ್ಯರು ಹಿಂದಿನ ಐದು ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ 2 ಸಭೆಗಳಿಗೆ ಹಾಜರಾಗದಿದ್ದಲ್ಲಿ ಮತ್ತು ಯಾವುದೇ ಎರಡು ಸಹಕಾರ ವರ್ಷಗಳಲ್ಲಿ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಬ್ಯಾಂಕು ದೊರಕಿಸಿಕೊಡುವ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಪ್ರತಿವರ್ಷ ಬಳಸಿಕೊಳ್ಳಲು ತಪ್ಪಿದಲ್ಲಿ, ಅಂಥ ಸದಸ್ಯರು ಒಂದು ವರ್ಷದ ಅವಧಿಗೆ ಸಾಮಾನ್ಯ ಸಭೆಯಲ್ಲಿ ಮತ ನೀಡುವ ಹಕ್ಕನ್ನು ಹಾಗೂ ನಿರ್ದೇಶಕರ ಚುನಾವಣೆಯಲ್ಲಿ ಮತ ನೀಡುವ ಹಾಗೂ ಸ್ಪರ್ಧಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲವೆಂದಿರುವುದರಿಂದ ತಾವು ಹೆಚ್ಚಿನ ವ್ಯವಹಾರವನ್ನು ಮಾಡಿ, ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ ತಮ್ಮ ಸದಸ್ಯತ್ವವನ್ನು ಸಕ್ರಿಯಗೊಳಿಸಿ, ತಮ್ಮ ಮತದಾನದ ಹಕ್ಕನ್ನು ಕಾಯ್ದುಕೊಂಡು ಬ್ಯಾಂಕಿನ ಪ್ರಗತಿಯಲ್ಲಿ ಪಾಲ್ಗೊಳ್ಳಬೇಕಾಗಿ ವಿನಂತಿಸುತ್ತೇವೆ.
4. ಸದಸ್ಯರು ಪಾಲುಮುನಾಫೆಯನ್ನು ನಗದೀಕರಿಸದೆ ಇದ್ದಲ್ಲಿ ಮೂರು ವರ್ಷಕ್ಕೆ ಮೇಲ್ಪಟ್ಟು ಬಾಕಿಯಿರುವ ಪಾಲು ಮುನಾಫೆಯನ್ನು ಬ್ಯಾಂಕಿನ ಮೀಸಲು ನಿಧಿ(ರಿಸರ್ವ್ ಫಂಡ್)ಗೆ ಸೇರಿಸಲಾಗುವುದು. ಪ್ರಸ್ತುತ ಪಾಲುಮುನಾಫೆಯನ್ನು ನೇರವಾಗಿ ಉಳಿತಾಯ ಖಾತೆಗೆ ಜಮಾಗೊಳಿಸಲಾಗುತ್ತಿದ್ದು, ಉಳಿತಾಯ ಖಾತೆ ಹೊಂದಿರದ ಸದಸ್ಯರು ತಮ್ಮ ಹತ್ತಿರದ ಶಾಖೆಯಲ್ಲಿ ಉಳಿತಾಯ ಖಾತೆಯನ್ನು ತೆರೆದು ವ್ಯವಹಾರವನ್ನು ನಡೆಸಿ ಸಕ್ರಿಯ ಸದಸ್ಯರಾಗಿ ಮುಂದುವರಿಯಬೇಕಾಗಿ ವಿನಂತಿ.
5. ಬ್ಯಾಂಕಿನ ಸಾಮಾನ್ಯ ಸದಸ್ಯರು ಗುರುತಿನ ಚೀಟಿಯನ್ನು ಪಡೆಯದಿದ್ದಲ್ಲಿ ಎರಡು ಸ್ಟ್ಯಾಂಪ್ ಸೈಜಿನ ಭಾವಚಿತ್ರವನ್ನು ಕೊಟ್ಟು ಗುರುತಿನ ಚೀಟಿ ಪಡೆಯಬೇಕಾಗಿ ವಿನಂತಿ.
6. ಸೇಫ್ ಲಾಕರ್ ಸೌಲಭ್ಯವು ನಮ್ಮ ಬ್ಯಾಂಕಿನ ಮಂಗಳೂರು, ಸುರತ್ಕಲ್, ಮಲ್ಪೆ, ಉಡುಪಿ, ಉಚ್ಚಿಲ ಮತ್ತು ಕುಂದಾಪುರ ಶಾಖೆಗಳಲ್ಲಿ ಅಳವಡಿಸಲಾಗಿದ್ದು, ಇದರ ಸದುಪಯೋಗವನ್ನು ಪಡೆಯಲು ಶಾಖೆಗಳಲ್ಲಿ ವಿಚಾರಿಸಬಹುದು.
7. ಕಳೆದ 10 ವರ್ಷಗಳಿಂದ ವ್ಯವಹಾರರಹಿತ ಖಾತೆಗಳಲ್ಲಿನ ಹಣವನ್ನು ರಿಸರ್ವ್ ಬ್ಯಾಂಕಿನ ಆದೇಶದನ್ವಯ ಠೇವಣಿದಾರರ ವಿದ್ಯಾಭ್ಯಾಸ ನಿಧಿಗೆ ವರ್ಗಾಯಿಸಲಾಗುವುದರಿಂದ ಅಂತಹ ಖಾತೆದಾರರು ಕೂಡಲೇ ಬ್ಯಾಂಕಿನ ಶಾಖೆಗಳನ್ನು ಸಂಪರ್ಕಿಸಿ ವ್ಯವಹಾರವನ್ನು ಪುನರಾರಂಭಿಸುವರೇ ವಿನಂತಿ.
8. ವಾರ್ಷಿಕ ರೂ.50,000/– ಮತ್ತು ಮೇಲ್ಪಟ್ಟ ಬಡ್ಡಿ ಆದಾಯಕ್ಕೆ ಎಲ್ಲಾ ಠೇವಣಿದಾರರಿಗೂ (ಹಿರಿಯ ನಾಗರಿಕರಿಗೆ ರೂ.1,00,000/–) ಟಿ.ಡಿ.ಎಸ್ ಅನ್ವಯವಾಗುವುದರಿಂದ, ಅಂತಹ ಸದಸ್ಯರು ತಮ್ಮ ಪಾನ್‌ಕಾರ್ಡಿನ ಜೆರಾಕ್ಸ್ ಪ್ರತಿಯನ್ನು ಸಂಬಂಧಪಟ್ಟ ಶಾಖೆಯಲ್ಲಿ ನೀಡಲು ವಿನಂತಿಸಲಾಗಿದೆ ಹಾಗೂ ಟಿ.ಡಿ.ಎಸ್‌ಗೆ ಅರ್ಹರಲ್ಲದ ಠೇವಣಿದಾರರು 15ಜಿ/15ಹೆಚ್‌ನ್ನು ದ್ವಿ–ಪ್ರತಿಯಲ್ಲಿ ಸಂಬಂಧಪಟ್ಟ ಶಾಖೆಯಲ್ಲಿ ನೀಡಲು ಈ ಮೂಲಕ ಸೂಚಿಸಲಾಗಿದೆ. ಪಾನ್‌ಕಾರ್ಡಿಗೆ ಆಧಾರ್ ನಂಬರ್‌ನ್ನು ಜೋಡಣೆ ಮಾಡದ ಗ್ರಾಹಕರು ಕೂಡಲೇ ಜೋಡಣೆ ಮಾಡಬೇಕಾಗಿ ವಿನಂತಿ. ಜೋಡಣೆ ಮಾಡದೇ ಇದ್ದಲ್ಲಿ ಇಲಾಖೆಯವರ ನಿರ್ದೇಶನದಂತೆ ತಮ್ಮ ಠೇವಣಿ ಮೇಲಿನ ಬಡ್ಡಿಯ ಮೇಲೆ ಶೇ.20 ಟಿಡಿಎಸ್ ಕಡಿತಗೊಳಿಸಬೇಕಾಗುವುದು. ದಯವಿಟ್ಟು ಗ್ರಾಹಕರು ಸಹಕರಿಸಬೇಕಾಗಿ ವಿನಂತಿ.
9. ಭಾರತೀಯ ರಿಸರ್ವ್ ಬ್ಯಾಂಕಿನ ಆದೇಶದನ್ವಯ ಬ್ಯಾಂಕಿನಲ್ಲಿ "ನಿಮ್ಮ ಗ್ರಾಹಕರನ್ನು ತಿಳಿಯಿರಿ" (KNOW YOUR CUSTOMER) ಕ್ರಮವನ್ನು ಅನುಷ್ಠಾನಗೊಳಿಸಿದ್ದು ಅದರ ಅನ್ವಯ ಎಲ್ಲಾ ಗ್ರಾಹಕರು ತಮ್ಮ ಖಾತೆಗಳಿಗೆ ಗುರುತು ಮತ್ತು ವಿಳಾಸ ದೃಢೀಕರಣಕ್ಕಾಗಿ ಆಧಾರ್ ಕಾರ್ಡ್, ಪಾನ್‌ಕಾರ್ಡ್ ಹಾಗೂ ಪಾಸ್‌ಪೋರ್ಟ್ ಸೈಜಿನ ಪೋಟೋಗಳನ್ನು ಕಡ್ಡಾಯವಾಗಿ ಸಂಬಂಧಪಟ್ಟ ಶಾಖೆಗಳಲ್ಲಿ ಹಾಜರುಪಡಿಸಿ, ಕೆವೈಸಿಯನ್ನು ನವೀಕರಿಸಿಕೊಳ್ಳಬೇಕಾಗಿ ವಿನಂತಿ.
10. ಬ್ಯಾಂಕಿನಲ್ಲಿ SMS, ATM & UPI ಸೌಲಭ್ಯವಿದ್ದು, ಗ್ರಾಹಕರು ತಮ್ಮ ಮೊಬೈಲ್ ಸಂಖ್ಯೆಯನ್ನು ಶಾಖೆಗಳಲ್ಲಿ ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ. **RTGS / NEFT, Mobile Banking, IMPS, QR Code, PoS Machine, E-Stamping** ಇತ್ಯಾದಿ ಆಧುನಿಕ ಸೌಲಭ್ಯಗಳನ್ನು ಅಳವಡಿಸಿದ್ದು, ಸದಸ್ಯರು ಇದರ ಸದುಪಯೋಗವನ್ನು ಪಡೆದು ಹೆಚ್ಚಿನ ವ್ಯವಹಾರವನ್ನು ಮಾಡುವುದು.
11. ವಿದ್ಯಾರ್ಥಿಗಳಿಗಾಗಿ "ಮಹಾಲಕ್ಷ್ಮೀ ವಿದ್ಯಾಸಿರಿ" Zero Balance Student Account ಯೋಜನೆಯು ಉಚಿತ SMS ಸೇವೆಯೊಂದಿಗೆ ಚಾಲ್ತಿಯಲ್ಲಿದ್ದು ಉಚಿತ ಎಟಿಎಂ ಕಾರ್ಡ್‌ನ್ನೂ ನೀಡಲಾಗುತ್ತಿದ್ದು, ಇದರ ಸದುಪಯೋಗವನ್ನು ಪಡೆದುಕೊಳ್ಳಬಹುದು.
12. ಠೇವಣಿಗಳ ಮೇಲೆ ಆಕರ್ಷಕ ಬಡ್ಡಿದರವನ್ನು ನೀಡುತ್ತಿದ್ದು, ಎರಡು ವರ್ಷ ಮೇಲ್ಪಟ್ಟು ಠೇವಣಿ ಇರಿಸಿದ ಹಿರಿಯ ನಾಗರಿಕರಿಗೆ/ ಸಂಘ–ಸಂಸ್ಥೆಗಳಿಗೆ ಶೇ.9.00 ಬಡ್ಡಿದರವನ್ನು ನೀಡಲಾಗುತ್ತಿದೆ. ಇದರ ಸದುಪಯೋಗ ಪಡೆಯುವರೇ ವಿನಂತಿಸುತ್ತೇವೆ. ಬ್ಯಾಂಕಿನ ಠೇವಣಿಯು ರೂ.5 ಲಕ್ಷದವರೆಗೆ ವಿಮಾ ಭದ್ರತೆಯನ್ನು ಹೊಂದಿರುತ್ತದೆ.
13. ಹೆಚ್ಚಿನ ಮಾಹಿತಿಗಾಗಿ ಅಧಿಕೃತ ವೆಬ್‌ಸೈಟ್ www.mahalakshmicoopbank.com / www.mahalakshmicoopbank.in, ಆಡಳಿತ ಕಛೇರಿ ಯಾ ಸ್ಥಳೀಯ ಶಾಖೆಯನ್ನು ಸಂಪರ್ಕಿಸಬೇಕಾಗಿ ವಿನಂತಿ.

**ಮಹಾಸಭೆಗೆ ಬರುವಾಗ ತಮ್ಮ ಗುರುತಿನ ಚೀಟಿಯೊಂದಿಗೆ ಹಾಜರಾಗುವುದು ಕಡ್ಡಾಯವಾಗಿರುತ್ತದೆ.**

अंतर्देशीय पत्र कार्ड

INLAND LETTER CARD

TO OPEN PLEASE TEAR HERE

To,

TO OPEN PLEASE TEAR HERE

Mahalakshmi Co-op. Bank Ltd., Udupi

ಮಹಾಲಕ್ಷ್ಮೀ ಕೋ-ಓಪರೇಟಿವ್ ಬ್ಯಾಂಕ್ ಲಿ., ಉಡುಪಿ

ESTD : 1978

*Your Bank @ Your home-Go Digital*

ಡಿಜಿಟಲ್ ಸೇವಾ ಸೌಲಭ್ಯ

UPI UNIFIED PAYMENTS INTERFACE

Paytm

PhonePe

G Pay

Pay

*If undelivered please return to :*

**Mahalakshmi Co-op. Bank Ltd., Udupi**

Administrative Office : First Floor, 'Kalmanje Towers' LBS Marg, AJJARKAD, UDUPI - 576 101



One of the leading Urban Co-op. Bank in Coastal Karnataka

Mahalakshmi Co-op. Bank Ltd., Udupi

ಮಹಾಲಕ್ಷ್ಮೀ ಕೋ-ಓಪರೇಟಿವ್ ಬ್ಯಾಂಕ್ ಲಿ., ಉಡುಪಿ

ESTD : 1978

**Administrative Office : First Floor, 'Kalmanje Towers'**
**LBS Marg, AJJARKAD, UDUPI - 576 101**
Telephone No.: 0820 2522010, 2528812
Email : ho@mahalakshmicoopbank.com
Website : www.mahalakshmicoopbank.com / www.mahalakshmicoopbank.in